# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1080

2 ಸದಸ್ಯರ ಹೆಸರು : ಶ್ರೀ ಅಡಗೂರು ಹೆಚ್ ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)

3 ಉತ್ತರಿಸಬೇಕಾಗಿದ್ದ ದಿನಾಂಕ : 14.12.2023

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯಲ್ಲಿ ಯಾವ ಸರ್ಕಾರಿ ಆದೇಶದನ್ವಯ ದಿನಾಂಕ:01.05.2015 ರಿಂದ 30.11.2023 ಯಾವ ಹುದ್ದೆಯ ಅಧಿಕಾರಿಯಿಂದ ಯಾವ ಹುದ್ದೆಯ ಅಧಿಕಾರಿಗಳಿಗೆ ಹೋಮ್ ಆರ್ಡರ್ಲಿ ಆಗಿ ಎಷ್ಟು ಸಂಖ್ಯೆಯ ಪೊಲೀಸ್ (ಅನುಯಾಯಿ/ ಪೇದೆ/ಮುಖ್ಯ ಪೇದೆ/ಎ.ಎಸ್.ಐ) ಹುದ್ದೆಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ; | ಕಛೇರಿ ಕರ್ತವ್ಯ ಹಾಗೂ ಸುರಕ್ಷಾ ಸಹಾಯಕರನ್ನಾಗಿ ಹೋಮ್ ಆರ್ಡರ್ಲಿಗಳನ್ನು ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಆದೇಶ ಸಂಖ್ಯೆ:862 ರನ್ವಯ ನೇಮಿಸಲಾಗುತ್ತಿದ್ದು, ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ಇರಿಸಲಾಗಿದೆ. |
| ಆ) | ಪೊಲೀಸ್ ಅಧಿಕಾರಿಗಳಿಗೆ ದಿನಾಂಕ: 01.01.2015 ರಿಂದ 30.11.2023 ನಿಯೋಜಿಸಿರುವ (ಅನುಯಾಯಿ/ಪೇದೆ/ ಮುಖ್ಯ ಪೇದೆ/ಎ.ಎಸ್.ಐ) ಹುದ್ದೆಯ ಸಿಬ್ಬಂದಿಗಳ ಹೆಸರು ಮತ್ತು ಹುದ್ದೆ ಸಂಖ್ಯೆ ಯಾವ ನೇಮಕಾತಿ ಪ್ರಾಧಿಕಾರದಿಂದ ಯಾವ ದಿನಾಂಕದಿಂದ ನಿಯೋಜಿಸಲಾಗಿದೆ; (ಸಿಬ್ಬಂದಿಗಳ ಸಂಪೂರ್ಣ ವಿವರಗಳನ್ನು ನೀಡುವುದು) | ಪೊಲೀಸ್ ಅಧಿಕಾರಿಗಳಿಗೆ ಅವಶ್ಯಕತೆಗನುಗುಣವಾಗಿ ಲಭ್ಯತೆಯನುಸಾರ ಸಿಬ್ಬಂದಿಯನ್ನು ಸರದಿ ಆರ್ಡರ್ಲಿ ಕರ್ತವ್ಯಕ್ಕೆ ಹಾಗೂ ಆಧಾರದ ಮೇಲೆ ನಿಯೋಜಿಸಲಾಗುತ್ತಿದೆ. |
| ಇ) | ದಿನಾಂಕ:01.01.2015 ರಿಂದ 30.11.2023 ರವರೆಗೆ ಹೋಮ್ ಆರ್ಡರ್ಲಿ ಆಗಿ ಕಾರ್ಯ ನಿರ್ವಹಿಸುತ್ತಿರುವ (ಅನುಯಾಯಿ/ ಪೇದೆ/ ಮುಖ್ಯ ಪೇದೆ/ಎ.ಎಸ್.ಐ ಹುದ್ದೆಯ ಸಿಬ್ಬಂದಿಗಳಿಗೆ ಪ್ರತಿ ವರ್ಷ ಪಾವತಿಸಿರುವ ಪೂರ್ಣ ವೇತನ, ಒಂದು ತಿಂಗಳ ಹೆಚ್ಚುವರಿ ವೇತನ, ಗಳಿಕೆ ರಜೆ ನಗದೀಕರಣ ವೇತನ, ಪ್ರಯಾಣ ಭತ್ಯೆ ರಿಸ್ಕ್ ಭತ್ಯೆ ಸಮವಸ್ತ್ರ ಭತ್ಯೆ ವಾಷಿಂಗ್ ಭತ್ಯೆ ಉತ್ತಮ ಸೇವೆ ಸಲ್ಲಿಸಿದ ಪ್ರಯುಕ್ತ ನೀಡಿರುವ (ರಿವಾರ್ಡ್ ಭತ್ಯೆ) ಬಹುಮಾನ ಭತ್ಯೆಯ ಸಂಪೂರ್ಣ ವಿವರ ನೀಡುವುದು; | ಆರ್ಡರ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಹುದ್ದೆ ಹಾಗೂ ಸೇವಾವಧಿಯ ಆಧಾರದ ಮೇಲೆ ನಿಯಮಾನುಸಾರ ಅರ್ಹರಿರುವ ವೇತನ, ಪತ್ರಾಂಕಿತ ರಜಾ ದಿನಗಳ ಬದಲಿನ ವೇತನ, ಗಳಿಕೆ ರಜೆ ನಗದೀಕರಣ ಸೌಲಭ್ಯ, ಪ್ರಯಾಣ ಭತ್ಯೆ, ರಿಸ್ಕ್ ಭತ್ಯೆ, ಸಮವಸ್ತ್ರ ಭತ್ಯೆ, ವಾಷಿಂಗ್ ಭತ್ಯೆಯನ್ನು ಇತ್ಯಾದಿ ವೇತನ ಹಾಗೂ ಭತ್ಯೆಗಳನ್ನು ಪಡೆಯುತ್ತಿರುತ್ತಾರೆ. |

ಹೆಚ್ ಡಿ 180 ಪಿಪಿಎಸ್ 2023

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು